# ಪರ್ಯಾಯ ಶೈಕ್ಷಣಿಕ ಯೋಜನೆ–2021-22

## 10ನೇ ತರಗತಿ ಆಗಸ್ಟ್ ಮಾಹೆ ದ್ವಿತೀಯ ಭಾಷೆ ಕನ್ನಡ

| ಕ್ರ ಸಂ | ತಿಂಗಳು ಮತ್ತು ವಾರ | ಪ್ರಮುಖ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| 1 | ಆಗಸ್ಟ್ ಮೊದಲನೆಯ ವಾರ | ಒಣ ಮರದ ಗಿಳಿ ಕಥೆಯನ್ನು ಆಲಿಸಿ ನೀತಿಯನ್ನು ಅರ್ಥಮಾಡಿಕೊಳ್ಳುವುದು. | ಕಥೆಯನ್ನು ಕೇಳಿಸುವುದು ಅಥವಾ ಸರಳ ನೀತಿ ಕಥೆಗಳ ಪುಸ್ತಕ ಒದಗಿಸಿ ಓದಿಸುವುದು. | ಮಕ್ಕಳು ಸರಳ ಕಥೆ ಕಲಿತು ಹೇಳುವುದು. (ಆಡಿಯೋ ರೆಕಾರ್ಡ್, ದೂರವಾಣಿ ಕರೆ ಮೂಲಕ) |
| | | ಕೊಟ್ಟಿರುವ ವಿಷಯವನ್ನು ಉಚ್ಚಾರಣೆ ದೋಷವಿಲ್ಲದೆ ನಿರರ್ಗಳವಾಗಿ ಓದುವುದು. | ಕಾಲ, ಸ್ಥಳ, ಕೃತಿ, ಪ್ರಶಸ್ತಿಗಳ ಮಾಹಿತಿ ಮಕ್ಕಳಿಗೆ ಶಿಕ್ಷಕರು ಹೇಳುತ್ತಾರೆ. ಮಕ್ಕಳು ಆಲಿಸಿ ವಾಕ್ಯರೂಪದಲ್ಲಿ ಬರೆದು, ಓದಲು ತಿಳಿಸುವುದು. | ಲೇಖಕರ ಪರಿಚಯ ಬರೆಸುವುದು. |
| | | ಸರಳ ಭಾಷಾಂಶಗಳನ್ನು ಅರಿಯುವುದು. | ನಿಘಂಟಿನ ಸಹಾಯದಿಂದ ಪದಗಳ ಅರ್ಥ ಹುಡುಕುವ ಚಟುವಟಿಕೆ<br>ಸ್ವಂತ ವಾಕ್ಯ ರಚನೆ<br>ಪಾಠದಲ್ಲಿ ಬಂದಿರುವ ತತ್ಸಮ ತದ್ಭವ ಪದ, ವಿರುದ್ಧಾರ್ಥಕ ಪದ ಗುರುತಿಸುವುದು<br>ಅಭ್ಯಾಸ ಹಾಳೆ 1 | |
| | | ಪಾಠವನ್ನು ಓದಿದ ನಂತರ ಪಾಠಕ್ಕೆ ಸಂಬಂಧಿಸಿದಂತಹ ಪ್ರಶ್ನೆಗಳಿಗೆ ಉತ್ತರಿಸುವ ಸಾಮರ್ಥ್ಯ ಬೆಳೆಸುವುದು. | ಪ್ರಶ್ನೋತ್ತರ ಚಟುವಟಿಕೆ | |
| 2 | ಎರಡನೆಯ ವಾರ | ಪರಹಿತ ಬಯಸುವ ಗುಣ, ಕೃತಜ್ಞತಾ ಮನೋಭಾವ ಬೆಳೆಸುವುದು. | ಒಣಮರದ ಗಿಳಿ ಪಾಠದಲ್ಲಿ ಅಡಕವಾಗಿರುವ ಮೌಲ್ಯಗಳನ್ನು ಪಟ್ಟಿ ಮಾಡಿಸುವುದು. ಬದುಕಿನಲ್ಲಿ ಆ ಮೌಲ್ಯಗಳನ್ನು ಅಳವಡಿಸಿಕೊಳ್ಳುವ ಬಗೆಯನ್ನು ಚರ್ಚಿಸುವುದು.<br>ಅಭ್ಯಾಸ ಹಾಳೆ 2 | |
| | | ಸೂಕ್ತ ಧ್ವನಿ ಏರಿಳಿತಗಳೊಂದಿಗೆ ಸಂಭಾಷಣೆ ಹೇಳುವುದು. | ಪಾಠದಲ್ಲಿ ಬರುವ ಗಿಳಿ ಹಾಗೂ ಇಂದ್ರನ ಪಾತ್ರಗಳ ಸಂಭಾಷಣೆಯನ್ನು ಮಕ್ಕಳಿಂದ ಹೇಳಿಸುವುದು | |
| | | ವ್ಯಾಕರಣಾಂಶಗಳನ್ನು ಅರಿಯುವುದು. | ಕನ್ನಡ ಸಂಧಿಗಳನ್ನು ಉದಾಹರಣೆ ಮೂಲಕ ಪರಿಚಯಿಸುವುದು.<br>ಅಭ್ಯಾಸ ಹಾಳೆಗಳ ಮೂಲಕ | ಘಟಕ ಪರೀಕ್ಷೆ |

| | | | | |
|---|---|---|---|---|
| | | | ಚಟುವಟಿಕೆ ಮಾಡಿ ಅರ್ಥೈಸುವುದು.<br>ಅಭ್ಯಾಸ ಹಾಳೆ 3 | |
| 3 | ಮೂರನೆಯ ವಾರ | **ಏಣಿ**<br>ನವ್ಯೋತ್ತರ ಸಾಹಿತ್ಯದ ಕಿರುಪರಿಚಯ ಮಾಡುವುದು. | ದಲಿತ, ಬಂಡಾಯ ಸಾಹಿತ್ಯ, ಸ್ತ್ರೀ ಮತ್ತು ಮುಸ್ಲಿಂ ಸಂವೇದನೆ ಪ್ರಕಾರದ ಸಾಹಿತ್ಯ ರಚಿಸಿದ ಪ್ರಮುಖ ಸಾಹಿತಿಗಳ ಪರಿಚಯ.<br>ಅಭ್ಯಾಸ ಹಾಳೆ 4 | |
| | | ಮಕ್ಕಳಲ್ಲಿ ವಾಕ್ಯ ರಚನಾ ಸಾಮರ್ಥ್ಯ ಬೆಳೆಸುವುದು. | ಪತ್ಯಪುಸ್ತಕ ಬಳಸಿ ಕವಯಿತ್ರಿ ಪರಿಚಯವನ್ನು ಮೌನವಾಗಿ ಓದಿ ಅರ್ಥ ಮಾಡಿಕೊಂಡು ವಾಕ್ಯರೂಪದಲ್ಲಿ ಬರೆದು ಓದುವುದು. | ಕವಯಿತ್ರಿ ಪರಿಚಯ ಬರೆಸುವುದು |
| | | ಪದ್ಯವನ್ನು ಓದಿದ ನಂತರ ಏನು? ಏಕೆ? ಮುಂತಾದ ಪ್ರಶ್ನೆಗಳಿಗೆ ಉತ್ತರಿಸುವರು. | ಪ್ರಶ್ನೋತ್ತರ ಚಟುವಟಿಕೆ<br>ಪದ್ಯದ ಸಾರಾಂಶವನ್ನು ವಿವರಿಸುವ ಆಡಿಯೋ ಕೇಳಿಸುವುದು | |
| 4 | ನಾಲ್ಕನೆಯ ವಾರ | ತಮ್ಮ ಏಳಿಗೆಗೆ ಕಾರಣರಾದವರನ್ನು ಗೌರವಿಸಬೇಕು ಎಂಬ ಪದ್ಯದ ಆಶಯವನ್ನು ಅರ್ಥೈಸಿಕೊಂಡು ಪದ್ಯದ ಸಾರಾಂಶ ಬರೆಸುವುದು. | ಮಾದರಿಯಾಗಿ ಒಂದು ಕಂಡಿಕೆ ಪದ್ಯಕ್ಕೆ ಸಾರಾಂಶ ಬರೆಯುವುದನ್ನು ತಿಳಿಸಿಕೊಡುವುದು. ಅದರಂತೆ ಉಳಿದ ಕಂಡಿಕೆಗಳಿಗೆ ಸಾರಾಂಶ ಬರೆಯುವಂತೆ ಪ್ರೇರೇಪಿಸುವುದು. | ಪದ್ಯದ ಭಾವಾರ್ಥವನ್ನು ತಮ್ಮದೇ ಮಾತುಗಳಲ್ಲಿ ಬರೆಯಲು ತಿಳಿಸುವುದು |
| | | ವ್ಯಾಕರಣಾಂಶಗಳನ್ನು ಅರಿಯುವುದು | ವಿರುದ್ಧಾರ್ಥಕ ಪದ, ಸಮಾಸ ಪದ, ನಾನಾರ್ಥ, ಸಮಾನಾರ್ಥಕ ಪದ, ತತ್ಸಮ ತದ್ಭವ ಪದಗಳನ್ನು ಅಭ್ಯಾಸ ಹಾಳೆಯ ಮೂಲಕ ಸ್ವಯಂ ಕಲಿಯುವಂತೆ ಚಟುವಟಿಕೆ ಮಾಡಿಸುವುದು<br>ಅಭ್ಯಾಸ ಹಾಳೆ 5 | |
| | | ಸಂದರ್ಭ ಸ್ವಾರಸ್ಯ ವಿವರಿಸುವುದು. | ಅಭ್ಯಾಸ ಹಾಳೆಯಲ್ಲಿ ನೀಡಿದ ಮಾದರಿಯನ್ನು ಗಮನಿಸಿ ಉಳಿದ ಸಂದರ್ಭ ವಾಕ್ಯಗಳನ್ನು ಸ್ವಾರಸ್ಯದೊಂದಿಗೆ ವಿವರಿಸಿ ಬರೆಯಲು ತಿಳಿಸುವುದು.<br>ಅಭ್ಯಾಸ ಹಾಳೆ 6 | ಘಟಕ ಪರೀಕ್ಷೆ |
| | | ರೂಪಣಾತ್ಮಕ ಮೌಲ್ಯಮಾಪನ<br>ಚಟುವಟಿಕೆ 1<br>ಚಟುವಟಿಕೆ 2<br>ಸಾಧನಾ ಪರೀಕ್ಷೆ 1 | ಕಲಿಕೆಗೆ ಪೂರಕ ಚಟುವಟಿಕೆಗಳನ್ನು ಆಯೋಜಿಸುವುದು<br>ಉದಾಹರಣೆಗೆ<br>➢ ಯಾವುದಾದರೂ ಒಂದು ನೀತಿ ಕತೆಯನ್ನು ಸಂಗ್ರಹಿಸಿ ಬರೆಯಿರಿ. ಕಥೆಯನ್ನು ಓದಿ ಅರ್ಥ ಮಾಡಿಕೊಂಡು ಅದರಲ್ಲಿರುವ ಮೌಲ್ಯಗಳನ್ನು ಪಟ್ಟಿ ಮಾಡಿ.<br>➢ ಏಣಿ ವಿಷಯದ ಕುರಿತು ಲಘು ಪ್ರಬಂಧ ಬರೆಯಿರಿ | |

**ಅಭ್ಯಾಸ ಹಾಳೆ 1**

**ಒಣಮರದ ಗಿಳಿ**

**ಈ ಕೆಳಗೆ ನೀಡಿರುವ ಪದಗಳಿಗೆ ಸಮಾನಾರ್ಥಕ ಪದಗಳನ್ನು ನಿಘಂಟು ಅಥವಾ ಪಠ್ಯಪುಸ್ತಕದ ಸಹಾಯದಿಂದ ಹುಡುಕಿ ಬರೆಯಿರಿ.**

| | | | |
|---|---|---|---|
| **ನಂಜು** | | **ಮುದ** | |
| ಸಿರಿ | | **ಭೋಗ** | |
| **ಕಳಕಳಿಸು** | | **ಬೀಗು** | |

ಆವರಣದಲ್ಲಿ ನೀಡಿರುವ ಪದಗಳನ್ನು ಬಳಸಿ ಕೆಳಗೆ ನೀಡಿರುವ ತತ್ಸಮ ಪದಗಳಿಗೆ ತದ್ಭವಗಳನ್ನು, ತದ್ಭವ ಪದಗಳಿಗೆ ತತ್ಸಮ ಪದಗಳನ್ನು ಸೂಕ್ತವಾಗಿ ಹೊಂದಿಸಿ ಬರೆಯಿರಿ.

(ಸಂತಸ, ರಾಜ, ಆಶ್ರಯ, ಜನುಮ, ವರುಷ, ಅಚ್ಚರಿ, ಶ್ರೀ, ಘಟಿಕಾ, ಬೊಮ್ಮ)

ಮಾದರಿ:

| | |
|---|---|
| ವರ್ಣ | ಬಣ್ಣ |

| | | | |
|---|---|---|---|
| ಆಶ್ಚರ್ಯ | | ಆಸರೆ | |
| ಗಳಿಗೆ | | ಸಿರಿ | |
| ಸಂತೋಷ | | ರಾಯ | |
| ವರ್ಷ | | ಜನ್ಮ | |

ವಿರುದ್ಧಾರ್ಥಕ ಪದಗಳನ್ನು ಸೂಕ್ತವಾಗಿ ಹೊಂದಿಸಿ ಬರೆಯಿರಿ

| | | | |
|---|---|---|---|
| ರೋಗ | ನಿಷ್ಫಲ | ಮಾದರಿ : ರೋಗ | ನಿರೋಗ |
| ಬಡತನ | ಸ್ವಹಿತ | | |
| ಕೃತಘ್ನ | ನಿರೋಗ | | |
| ಫಲ | ಸಿರಿತನ | | |
| ಪರಹಿತ | ಕೃತಜ್ಞ | | |

ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ ಬರೆಯಿರಿ
ಮಾದರಿ: ಪರಹಿತ : ನಾವು ಸದಾ ಪರಹಿತ ಚಿಂತನೆ ಮಾಡಬೇಕು.

ಆಶ್ಚರ್ಯ : ________________________________________________

________________________________________________

ಸಮೃದ್ಧಿ : ________________________________________________

________________________________________________

ಸಂಪಾದಿಸು : ________________________________________________

________________________________________________

**ಅಭ್ಯಾಸ ಹಾಳೆ 2**

**ಒಣಮರದ ಗಿಳಿ**

**ಒಣಮರದ ಗಿಳಿ ಪಾಠದಲ್ಲಿ ನೀವು ಗುರುತಿಸಿದ ಮಾನವೀಯ ಮೌಲ್ಯಗಳನ್ನು ಪಟ್ಟಿ ಮಾಡಿ**

**ಉದಾಹರಣೆಗೆ : ಕೃತಜ್ಞತಾ ಮನೋಭಾವ**

| | | |
|---|---|---|
| | | |
| | | |

**ಯಾವುದಾದರೂ ಒಂದು ಮೌಲ್ಯವನ್ನು ನೀವು ಜೀವನದಲ್ಲಿ ಅಳವಡಿಸಿಕೊಳ್ಳುವ ಬಗೆಯನ್ನು ವಿವರಿಸಿ**

**ಮಾದರಿ : ಕೃತಜ್ಞತಾ ಮನೋಭಾವ**

**ನಮಗೆ ಸಹಾಯ ಮಾಡಿದವರಿಗೆ ಎಂದಿಗೂ ನಾವು ಕೃತಜ್ಞರಾಗಿರಬೇಕು. ನಮಗೆ ಒಂದು ಸಣ್ಣ ಸಹಾಯ ಮಾಡಿದವರನ್ನು ಸಹ ನಾವು ಸದಾ ಸ್ಮರಿಸಬೇಕು. ಸಹಾಯ ಮಾಡಿದವರ ಬದುಕು ಸದಾ ಹಸನಾಗಿರಲಿ ಎಂದು ಹಾರೈಸಬೇಕು. ನಾವು ಕಷ್ಟದಲ್ಲಿದ್ದಾಗ ನಮಗೆ ನೆರವಾದವರನ್ನು ನಮ್ಮ ಸಂತೋಷದ ಕಾಲದಲ್ಲಿ ಮರೆತು ಬಿಡಬಾರದು. ಒಂದು ವೇಳೆ ನಮಗೆ ನೆರವಾದವರು ಸಂಕಷ್ಟಕ್ಕೆ ಸಿಲುಕಿದಾಗ ನಮ್ಮ ಕೈಲಾದ ಸಹಾಯ ಮಾಡಬೇಕು. ಸಹಾಯ ಮಾಡುವ ಶಕ್ತಿ ನಮಗೆ ಇಲ್ಲದಿದ್ದರೂ ಕನಿಷ್ಠ ಅವರ ಸಂಕಷ್ಟ ಬೇಗ ದೂರವಾಗಲಿ ಎಂದು ಹಾರೈಸಬೇಕು. ಅವರ ಕಷ್ಟಕ್ಕೆ ಮಿಡಿಯುವ ಗುಣವನ್ನು ಬೆಳೆಸಿಕೊಳ್ಳಬೇಕು.**

| |
|---|
| |

**ಅಭ್ಯಾಸ ಹಾಳೆ 3**

**ಒಣಮರದ ಗಿಳಿ**

**ಕನ್ನಡ ಸಂಧಿಗಳು**

ಲೋಪ ಸಂಧಿ : ಸ್ವರದ ಮುಂದೆ ಸ್ವರವು ಬಂದು ಸಂಧಿಯಾಗುವಾಗ ಅರ್ಥ ಕೆಡದಿದ್ದ ಸಂದರ್ಭದಲ್ಲಿ ಪೂರ್ವಪದದ ಕೊನೆಯ ಸ್ವರವು ಬಿಟ್ಟುಹೋಗುವುದನ್ನು ಲೋಪ ಸಂಧಿ ಎನ್ನುವರು.

ಉದಾಹರಣೆಗೆ : ಮಾತು + ಇಲ್ಲ = ಮಾತಿಲ್ಲ

ಆಗಮ ಸಂಧಿ : ಸ್ವರದ ಮುಂದೆ ಸ್ವರವು ಬಂದಾಗ ಲೋಪಸಂಧಿ ಮಾಡಿದರೆ ಅರ್ಥವು ಕೆಡುವಂತಿದ್ದಲ್ಲಿ ಆ ಎರಡು ಸ್ವರಗಳ ಮಧ್ಯದಲ್ಲಿ 'ಯ'ಕಾರವನ್ನೋ ಅಥವಾ 'ವ'ಕಾರವನ್ನೋ ಹೊಸದಾಗಿ ಸೇರಿಸಿ ಹೇಳುತ್ತೇವೆ. ಇದಕ್ಕೆ 'ಆಗಮ ಸಂಧಿ' ಎನ್ನುವರು.

ಉದಾಹರಣೆಗೆ: ಮನೆ + ಅನ್ನು = ಮನೆಯನ್ನು

ಮರ + ಅನ್ನು = ಮರವನ್ನು

ಆದೇಶ ಸಂಧಿ : ಸಂಧಿಯಾಗುವಾಗ ಉತ್ತರಪದದ ಆದಿಯಲ್ಲಿರುವ ಕ ತ ಪ ವ್ಯಂಜನಗಳಿಗೆ ಕ್ರಮವಾಗಿ ಗ ದ ಬ ವ್ಯಂಜನಗಳು ಆದೇಶವಾಗಿ ಬಂದರೆ ಅದನ್ನು ಆದೇಶ ಸಂಧಿ ಎನ್ನುವರು.

ಉದಾಹರಣೆಗೆ : ಮಳೆ + ಕಾಲ = ಮಳೆಗಾಲ

ಬೆಟ್ಟ + ತಾವರೆ = ಬೆಟ್ಟದಾವರೆ

ಹೂ + ಪುಟ್ಟಿ = ಹೂಬುಟ್ಟಿ

**ಈ ಕೆಳಗೆ ನೀಡಿರುವ ಸಂಧಿಪದಗಳನ್ನು ಬಿಡಿಸಿ ಬರೆಯಿರಿ**

| **ನಮ್ಮೊಳಗೆ** | **ನಮ್ಮ + ಒಳಗೆ** |
|---|---|
| ಮನೆಯಲ್ಲಿ | |
| ಮನವನ್ನು | |
| ಚಳಿಗಾಲ | |
| ಗೊತ್ತಿಲ್ಲ | |

**ಮೇಲಿನ ಸಂಧಿ ನಿಯಮಗಳನ್ನು ಓದಿ ಅರ್ಥಮಾಡಿಕೊಂಡು, ಉದಾಹರಣೆಗಳನ್ನು ಗಮನಿಸಿ. ನಂತರ ಕೆಳಗೆ ನೀಡಿರುವ ಸಂಧಿ ಪದಗಳನ್ನು ಬಿಡಿಸಿ ಸಂಧಿಯನ್ನು ಹೆಸರಿಸಿ**

| **ಪದ** | **ಬಿಡಿಸಿ ಬರೆ** | **ಸಂಧಿ ಹೆಸರು** |
|---|---|---|
| **ಬೇರೊಬ್ಬ** | **ಬೇರೆ + ಒಬ್ಬ** | **ಲೋಪ ಸಂಧಿ** |
| ಗುರುವನ್ನು | | |
| ಶಾಲೆಯಿಂದ | | |
| ಹುಲ್ಲುಗಾವಲು | | |
| ಮೈದೊಳೆ | | |
| ನಿನಗಲ್ಲದೆ | | |
| ಕಂಬನಿ | | |

| | | |
|---|---|---|
| ಬೆನ್ನಟ್ಟು | | |
| ಬಾಣವನ್ನು | | |

## ಅಭ್ಯಾಸ ಹಾಳೆ : 4

**ದಲಿತ, ಬಂಡಾಯ ಸಾಹಿತ್ಯ, ಸ್ತ್ರೀ ಮತ್ತು ಮುಸ್ಲಿಂ ಸಂವೇದನೆ ಪ್ರಕಾರದ ಸಾಹಿತ್ಯ ರಚಿಸಿದ ಪ್ರಮುಖ ಸಾಹಿತಿಗಳ ಭಾವಚಿತ್ರಗಳನ್ನು ಹಾಗೂ ಹೆಸರುಗಳನ್ನು ನೀಡಲಾಗಿದ್ದು, ಸಾಹಿತಿಗಳನ್ನು ಗುರುತಿಸಿ ಅವರ ಭಾವಚಿತ್ರದ ಕೆಳಗೆ ಆಯಾ ಸಾಹಿತಿಗಳ ಹೆಸರನ್ನು ಬರೆಯಿರಿ.**

ಸಾಹಿತಿಗಳು : ಸಾರಾ ಅಬುಬಕರ್, ಸಿದ್ದಲಿಂಗಯ್ಯ, ದೇವನೂರು ಮಹದೇವ, ಬರಗೂರು ರಾಮಚಂದ್ರಪ್ಪ, ಸುಕನ್ಯಾ ಮಾರುತಿ, ಲಲಿತಾ ನಾಯಕ್, ರಹಮತ್ ತರೀಕೆರೆ

**ಮಾದರಿ :**



**ಸುಕನ್ಯಾ ಮಾರುತಿ**

| | | |
|---|---|---|
|  |  |  |
| | | |
| | | |

|  |  |  |
|---|---|---|
| | | |

**ಅಭ್ಯಾಸ ಹಾಳೆ 5**

**ಏಣಿ**

**ವಿರುದ್ಧಾರ್ಥಕ ಪದಗಳನ್ನು ಸೂಕ್ತವಾಗಿ ಹೊಂದಿಸಿ ಬರೆಯಿರಿ**

| **ತಿರಸ್ಕಾರ** | **ಕಟ್ಟು** | **ಮಾದರಿ : ತಿರಸ್ಕಾರ** | **ಸ್ವೀಕಾರ** |
|---|---|---|---|
| ಶಾಶ್ವತ | ಹಗುರ | | |
| ಇಳಿ | ಸ್ವೀಕಾರ | | |
| ಸುರಕ್ಷಿತ | ನಿರ್ಭಯ | | |
| ಭಾರ | ಅಶಾಶ್ವತ | | |
| ಭಯ | ಅಸುರಕ್ಷಿತ | | |
| ಕೆಡವು | ಹತ್ತು | | |

**ಈ ಕೆಳಗೆ ನೀಡಿರುವ ಪದಗಳಿಗೆ ಸಮಾನಾರ್ಥಕ ಪದಗಳನ್ನು ನಿಘಂಟು ಅಥವಾ ಪಠ್ಯಪುಸ್ತಕದ ಸಹಾಯದಿಂದ ಹುಡುಕಿ ಬರೆಯಿರಿ**

| | | | |
|---|---|---|---|
| ಆಸರೆ | | ಶಿಖಂಡಿ | |
| ನಮ್ರತೆ | | ಬುನಾದಿ | |
| ಹಮ್ಮು | | ಪಾಡು | |

**ನಾನೊಂದು ಏಣಿ**
**ಎಷ್ಟೊಂದು ಜನರನ್ನು**
**ಎತ್ತಿ ಹಿಡಿದಿದ್ದೇನೆ !**
**ನನ್ನ ಮೇಲೆ ಹತ್ತಿ ಹೋದ**
**ಕೆಲವರು ನನಗೆ ಕೈ ಬೀಸಿದ್ದಾರೆ,**
**ನಾನೂ ನೋಡುತ್ತೇನೆ**
**ಹೇಗೆ ಇಳಿಯುತ್ತಾರೆಂದು.**

**ಪದ್ಯಭಾಗವನ್ನು ಓದಿ, ಕೆಳಗಿನ ಅಂಶಗಳನ್ನು ಬಳಸಿಕೊಂಡು ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ**

(ಏಣಿಯನ್ನು ಬಳಸಿ ಮೇಲೇರಿದವರು, ಏಣಿಯ ಸಹಾಯ ಪಡೆದವರ ಅಹಂಕಾರ, ಏಳಿಗೆಗೆ ಕಾರಣರಾದವರನ್ನು ಮರೆಯುವುದು, ಸಹಾಯ ಮಾಡಿದವರಿಗೆ ಕೃತಜ್ಞತೆ ತೋರದಿರುವುದು, ಏಣಿಯ ಸವಾಲು)

**ಅಭ್ಯಾಸ ಹಾಳೆ 6**

**ಏಣಿ**

**ಮಾದರಿಯಂತೆ ಸಂದರ್ಭ ವಾಕ್ಯಗಳನ್ನು ಸ್ವಾರಸ್ಯದೊಂದಿಗೆ ವಿವರಿಸಿ ಬರೆಯಿರಿ**

**ನಾನೂ ನೋಡುತ್ತೇನೆ ಹೇಗೆ ಇಳಿಯುತ್ತಾರೆಂದು**

ಈ ಮಾತನ್ನು "ಸುಕನ್ಯಾ ಮಾರುತಿ"ಯವರು ಬರೆದಿರುವ "ಸಮಗ್ರ ಕವನ ಸಂಕಲನ"ದಿಂದ ಆರಿಸಲಾದ "ಏಣಿ" ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಏಣಿಯು ತನ್ನನ್ನು ಬಳಸಿಕೊಂಡು ಮೇಲೇರಿ ನಂತರ ತಿರಸ್ಕಾರದಿಂದ ಕಂಡ ಜನರಿಗೆ ಈ ಮಾತನ್ನು ಹೇಳಿತು. ಶ್ರಮಿಕರ ಮತ್ತು ಜನಸಾಮಾನ್ಯರ ಸಹಾಯ ಪಡೆದು ಮೇಲೇರಿದವನಿಗೆ ಅಹಂ ತುಂಬಿಕೊಂಡಾಗ ತನ್ನ ಏಳಿಗೆಗೆ ಕಾರಣರಾದವರನ್ನು ಮರೆಯುತ್ತಾನೆ. ಆದರೆ ಮೇಲೇರಿದವನು ಒಂದಲ್ಲ ಒಂದು ದಿನ ಕೆಳಗಿಳಿಯಲೇಬೇಕು. ಆಗ ನನ್ನ ಸಹಾಯವಿಲ್ಲದೆ ಹೇಗೆ ಕೆಳಗೆ ಇಳಿಯುತ್ತಾರೋ ನಾನು ನೋಡುತ್ತೇನೆ ಎಂದು ಏಣಿ ಸವಾಲು ಹಾಕುವುದನ್ನು ಈ ವಾಕ್ಯ ತಿಳಿಸುತ್ತದೆ.

ಹಣ, ಅಧಿಕಾರದ ಮದದಲ್ಲಿ ತಾವು ನಡೆದು ಬಂದ ಹಾದಿ ಮರೆತ ಜನರನ್ನು ಎಚ್ಚರಿಸುವ ಜೊತೆಗೆ ಹಣ, ಅಧಿಕಾರ, ಯಶಸ್ಸು ಯಾವುದೂ ಶಾಶ್ವತವಲ್ಲ ಎಂಬುದನ್ನು ಈ ಮಾತು ವ್ಯಕ್ತಪಡಿಸುತ್ತದೆ.

**ನಾನು ತಿರಸ್ಕರಿಸಿದರೆ ಏನು ಮಾಡುತ್ತಾರೆ ಈ ಶಿಖಂಡಿಗಳು?**

ನಮ್ರತೆಗೆ ನಾ ಕರಗುತ್ತೇನೆ.

**ಘಟಕ ಪರೀಕ್ಷೆ 01**
**ಒಣಮರದ ಗಿಳಿ**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ. 4 X 1 = 4**

1. ಆಶ್ರಯ ಈ ಪದದ ತದ್ಭವ ರೂಪ
   ಎ. ಆಶ್ಚರ್ಯ ಬಿ. ಅಚ್ಚರಿ ಸಿ. ಆಸರೆ ಡಿ. ಆಶ್ರಯ
2. ಪರಹಿತ – ಈ ಪದದ ವಿರುದ್ಧಾರ್ಥಕ ಪದ
   ಎ. ಬೇರೆಯವರ ಹಿತ ಬಿ. ಸ್ವಾರ್ಥ ಸಿ. ರಹಿತ ಡಿ. ಸ್ವಹಿತ
3. ಬೆನ್ನಟ್ಟು ಪದವು ಯಾವ ಸಂಧಿಗೆ ಉದಾಹರಣೆಯಾಗಿದೆ
   ಎ. ಲೋಪ ಸಂಧಿ ಬಿ. ಆಗಮ ಸಂಧಿ ಸಿ. ಆದೇಶ ಸಂಧಿ ಡಿ. ಯಾವುದೂ ಅಲ್ಲ
4. ಕನ್ನಡ ವರ್ಣಮಾಲೆಯಲ್ಲಿ ಇರುವ ಒಟ್ಟು ವ್ಯಂಜನಗಳ ಸಂಖ್ಯೆ
   ಎ. 25 ಬಿ. 34 ಸಿ. 49 ಡಿ. 05

**II. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ 4 X 1 = 4**

5. ವಿಷದ ಬಾಣವು ಮರಕ್ಕೆ ಏಕೆ ತಗುಲಿತು?
6. ಇಂದ್ರನಿಗೆ ಗಿಳಿಯನ್ನು ಕಂಡು ಆಶ್ಚರ್ಯವಾದದ್ದು ಏಕೆ?
7. ಇಂದ್ರನು ತನಗಾದ ಸಂತೋಷವನ್ನು ಯಾವ ರೀತಿ ಪ್ರಕಟಿಸಿದನು?
8. ಒಣಮರದ ಗಿಳಿ ಪಾಠದ ಆಕರಕೃತಿ ಯಾವುದು?

**III. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 2 x 2 = 4**

9. ಮರವನ್ನು ಬಿಟ್ಟು ಹೋಗದೆ ಇರಲು ಗಿಳಿಯು ನೀಡಿದ ಸಮರ್ಥನೆ ಏನು?
10. ಗಿಳಿಯು ಇಂದ್ರನನ್ನು ಯಾವ ವರ ಕೇಳಿತು?

**IV. ಕೆಳಗಿನ ಕವಿ/ಸಾಹಿತಿ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 1 x 3 = 3**

11. ಅ. ರಾ. ಮಿತ್ರ

**ಘಟಕ ಪರೀಕ್ಷೆ 02**

**ಏಣಿ**

**III. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ. 4 X 1 = 4**

1. ಆಕಾಶ ಈ ಪದದ ತದ್ಭವ ರೂಪ
   ಎ. ಆಶ್ಚರ್ಯ ಬಿ. ಅಚ್ಚರಿ ಸಿ.ಆಗಸ ಡಿ. ಆಶ್ರಯ
2. ಸುರಕ್ಷಿತ – ಈ ಪದದ ವಿರುದ್ಧಾರ್ಥಕ ಪದ
   ಎ. ಅಸುರಕ್ಷಿತ ಬಿ. ರಕ್ಷಿತ ಸಿ. ದುರಕ್ಷಿತ ಡಿ. ಅಸುರ ರಕ್ಷಿತ
3. ಶಿಖಂಡಿ ಪದದ ಅರ್ಥ
   ಎ. ಶಿಖರ ಬಿ. ಪರ್ವತ ಸಿ. ನಪುಂಸಕ ಡಿ. ಯಾವುದೂ ಅಲ್ಲ
4. ಏಣಿ ಕವಿತೆ ಏನನ್ನು ಅಭಿವ್ಯಕ್ತಿಸಿದೆ
   ಎ. ಮುಸ್ಲಿಂ ಸಂವೇದನೆ ಬಿ. ಸ್ತ್ರೀ ಸಂವೇದನೆ ಸಿ. ದಲಿತ ಸಂವೇದನೆ ಡಿ. ಸಿರಿ ಸಂವೇದನೆ

**IV. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ 3 X 1 = 3**

5. ಏಣಿ ಜನರಿಗೆ ಮಾಡಿದ ಉಪಕಾರವೇನು?
6. ಏಣಿಗೆ ಬೀಳುವ ಭಯವಿಲ್ಲ ಏಕೆ?
7. ಮೇಲೇರಿದವರು ತ್ರಿಶಂಕುಗಳಾಗುವುದು ಯಾವಾಗ?

**V. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 2 x 2 = 4**

8. ಏಣಿ ಹೇಳಿಕೊಳ್ಳುವ ಕಷ್ಟಗಳೇನು?
9. ಏಣಿ ತಾನು ಎಂಥವರಿಗೆ ಯಾವ ರೀತಿ ಸ್ಪಂದಿಸುತ್ತೇನೆ ಎಂದು ಹೇಳಿತು?

**VI ಕೆಳಗಿನ ಕವಿ/ಸಾಹಿತಿ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 1 x 3 = 3**

10. ಸುಕನ್ಯಾ ಮಾರುತಿ

**VII. ಸಂದರ್ಭದೊಡನೆ ವಿವರಿಸಿ 2 x 3 = 6**

11. ನಮ್ರತೆಗೆ ನಾ ಕರಗುತ್ತೇನೆ.
12. ಇವರಿಗೆ ಭಾರ ಹೊತ್ತವರ ಕಾಳಜಿಯೇ ಇಲ್ಲ.